# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/507/2016/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 08/12/2020.

## ವಿಚಾರಣಾ ವರದಿ

**ಉಪಸ್ಥಿತರು:** ಪುಷ್ಪಾಂಜಲಿ.ಬಿ.,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀಮತಿ ಪಿ.ಎ. ಕುಂಬಾರ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬರಡೋಲಾ ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಜಿಎಂ-409/2012/ಎ.ಆರ್.ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 17/09/2016.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 656 ಗ್ರಾಪಂಕಾ 2016 ಬೆಂಗಳೂರು, ದಿನಾಂಕ: 17/10/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/507/2016, ಬೆಂಗಳೂರು ದಿನಾಂಕ: 25/10/2016.

* * * *

ಈ ದೂರನ್ನು, ದೂರುದಾರರಾದ ಶ್ರೀ ರಾಚಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ಬರಡೋಲಾ ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರು ಶ್ರೀಮತಿ ಪಿ.ಎ. ಕುಂಬಾರ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬರಡೋಲಾ, ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುತ್ತಾರೆಂದು ಆಪಾದಿಸಿ ದೂರು ದಾಖಲಿಸಿರುತ್ತಾರೆ.

08/12

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 17/10/2016 ರಂದು, ಮಾನ್ಯ ಉಪಲೋಕಾಯುಕ್ತ–1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತ–1 ರವರು ದಿನಾಂಕ: 25/10/2016 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 31/01/2017 ರಂದು ಕಳುಹಿಸಲಾಗಿರುತ್ತದೆ.

**ANNEXURE NO. 1**

**CHARGE**

2. That, you DGO – Smt. P.A. Kumbara, the then Panchayath Development Officer, Baradola Gram Panchayath, Indi Taluk, Vijayapura District, has allotted the houses to the persons who are already having houses and who are not eligible for the benefit and amount has been paid to them beneficiaries who are not having houses. Thus you DGO, being a Government /public servant has failed to maintain absolute integrity besides devotion to duty and acted in a manner unbecoming of a Government servant and thus committed misconduct as enumerated U/R 3(1) of Karnataka Civil Service (Conduct) Rules 1966.

28/12

## ANNEXURE NO. II
## STATEMENT OF IMPUTATIONS OF MISCONDUCT

3. On the basis of complaint filed by Sri.Rachappa Channappa Hosaokkaliga, Present Member of Grama Panchayath, Baradola, Indi Taluk, Bijapur District (hereinafter referred to as 'complainant' for short) against 1) Sri.Gurushanthappa Karabasappa Kumbara, Ex.President, Baradola Grama Panchayath, 2) Smt.Mahadevi Vittala Bellundagi- Ex.President, Baradola Grama Panchayath, Indi Taluk, Bijapur District and 3)Sri.Kalavantha, Secretary, Baradola Grama Panchayath, Baradola, Indi Taluk, Bijapur District alleging misconduct, an investigation was taken up after invoking Section 9 of Karnataka Lokayukta Act, 1984.

4. **According to the Complainant: -**

Sri.Gurushanthappa Karabasappa Kumbara, 2) Smt.Mahadevi Vittala Bellundagi and 3) Sri.Kalavantha, have issued cheques in the names of beneficiaries who have not constructed houses and they have allotted houses to persons who are not eligible for allotment. He has enclosed list of 36 persons to whom cheques have been issued and list of 48 persons who were not eligible for allotment. He has further stated that there are two bank accounts for beneficiaries.

5. Report was called for from S.P., Lokayukta Bijapur. Investigation has been conducted by Dy.S.P., Lokayukta, Bijapur ( I.O. for short). I.O. has submitted report.

2 28/12

6. Report of I.O. is that the allegations are substantiated and following officers are responsible for the illegalities committed:

1.Sri.S.G.Kalavantha
2.Smt.M.V.Bellundagi
3.Smt.P.A.Kumbara- the then PDO.
4.Smt.Mananda Biradara-Ex.President
5.Sri.T.V.Sinde-Ex.President and
6. Smt.Lakshmi Bai Powara-Ex.President.

7. Smt.P.A.Kumbara- the then PDO, Smt.Mananda Biradara-Ex.President, Sri.T.V.Sinde-Ex.President and Smt.Lakshmi Bai Powara-Ex.President have been impleaded and copies of Complaint and report of I.O. were sent to them for their reply and they have submitted replies denying the allegations.

8. The report of I.O. prima facie show that the DGO colluding with Ex president of Gram Panchayath have allotted houses to persons who are already having houses and who are not eligible for the benefit and amount has been paid to the beneficiaries who are not having houses. I.O has mentioned the names of said beneficiaries in the report. Therefore, in view of report of I.O. reply of the DGO has not been acceptable to drop the proceedings against her.

9. The facts supported by the material on record show that the DGO, being a Government servant, has failed to maintain absolute integrity, devotion to duty and also acted in a manner unbecoming of a Government servant, and thereby committed misconduct and made herself liable for disciplinary action.

28/12

10. Since the said facts and material on record prima-facie show that the DGO has committed misconduct as per Rule 3(1) of the KCS (Conduct) Rules, 1966, a report u/s 12(3) of Karnataka Lokayukta Act, was sent to the Competent Authority with a recommendation to initiate disciplinary proceedings Under Rule 14-A of Karnataka Civil Services (Classification, Control and Appeals) Rules 1957. In turn Competent Authority initiated disciplinary proceedings against the DGO and entrusted the enquiry to this Institution vide reference no. 1 and Hon'ble Upalokayukta nominated this enquiry Authority, to conduct enquiry and report vide reference No. 2. Hence, this charge.

4. ದೂರಿನಲ್ಲಿನ ಅಂಶಗಳು, ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿ, ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ಆ.ಸ.ನೌರವರಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆ.ಸ.ನೌರವರು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರ ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡು ಬಂದಿದ್ದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ, ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ.

28/12

5. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ: 21/02/2017 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

6. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

7. ಆ.ಸ.ನೌ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೂರಿನಲ್ಲಿ ಆಪಾದಿಸಿರುವ ಸಂಗತಿಗಳನ್ನು ನಿರಾಕರಿಸಿರುತ್ತಾರೆ. ಆ.ಸ.ನೌರವರು ಗ್ರಾಮ ಪಂಚಾಯತ್ ನಿರ್ವಹಿಸುವ ಯೋಜನೆಗಳ ಮಾರ್ಗಸೂಚಿ ಮತ್ತು ನಿಯಮಾನುಸಾರ ಕಾಮಗಾರಿಗಳ ಅನುಷ್ಠಾನ ಮಾಡಲಾಗಿರುತ್ತದೆ ಹಾಗೂ ತಾವು ಯಾವುದೇ ಯೋಜನೆಯಲ್ಲಿ ಯಾವುದೇ ರೀತಿಯಿಂದ ಅವ್ಯವಹಾರ ಮಾಡಿರುವುದಿಲ್ಲ, ಆದಕಾರಣ ಸದರಿ ಪ್ರಕರಣದಿಂದ ದೋಷಮುಕ್ತಳನ್ನಾಗಿ ಮಾಡಲು ವಿನಂತಿಸಿಕೊಂಡಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ರಾಚಪ್ಪ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.1 ರಿಂದ 5 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ ಹಾಗೂ ತನಿಖಾಧಿಕಾರಿಗಳಾದ ಶ್ರೀ ಶೇಖರಪ್ಪ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.6 ರಿಂದ 8 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ

28/12

ಗುರುತಿಸಿಕೊಂಡಿರುತ್ತಾರೆ ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ತಗೆದುಕೊಳ್ಳಲಾಗಿರುತ್ತದೆ.

9. ಆ.ಸ.ನೌ ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯು-1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ.1 ರಿಂದ ನಿ.ಡಿ.3 ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ಶ್ರೀ ರಾಜಕುಮಾರ, ಕಾರ್ಯನಿರ್ವಾಹಕ ಅಧಿಕಾರಿ, ಇಂಡಿ ತಾಲ್ಲೂಕು ಪಂಚಾಯತ್ ಇವರನ್ನು ಡಿ.ಡಬ್ಲ್ಯೂ-2 ಎಂದು ಆ.ಸ.ನೌ ರವರ ಪರವಾಗಿ ಸಾಕ್ಷ್ಯ ನುಡಿದಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

11. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?

12. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

2/8/19

**ಕಾರಣಗಳು:**

14. ಈ ಪ್ರಕರಣದಲ್ಲಿ ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ ರಾಚಪ್ಪ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ.1 ರಿಂದ ನಿ.ಪಿ.5ರ ವರೆಗಿನ ದಾಖಲೆಗಳನ್ನು ಕ್ರಮವಾಗಿ ಗುರುತಿಸಿಕೊಂಡಿರುತ್ತಾರೆ ಅಂದರೆ ದೂರುದಾರರ ದೂರನ್ನು ನಿ.ಪಿ.1, ನಮೂನೆ–1 ಅನ್ನು ನಿ.ಪಿ.2, ನಮೂನೆ–2 ಅನ್ನು ನಿ.ಪಿ.3, ಫಲಾನುಭವಿಗಳ ವಿವರವನ್ನು – ನಿ.ಪಿ.4, ದೂರುದಾರರು ಸಲ್ಲಿಸಿದ ಫಲಾನುಭವಿಗಳ ವಿವರವನ್ನು – ನಿ.ಪಿ.5 ಎಂದು ಗುರುತಿಸಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ ಶೇಖರಪ್ಪ, ನಿವೃತ್ತಿ ಡಿ.ವೈ.ಎಸ್.ಪಿ. ರವರನ್ನು ಪಿ.ಡಬ್ಲ್ಯೂ–2 ಆಗಿ ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.6 ರಿಂದ ನಿ.ಪಿ. 8 ರವರೆಗೆ ಅಂದರೆ ತನಿಖಾಧಿಕಾರಿಗಳ ತನಿಖಾ ವರದಿ ದಿ: 13/12/2013ರನ್ನು – ನಿ.ಪಿ.6, ಜಯರಾಮ ಎಂ.ಸಿ, ವಿಮಲಾಬಾಯಿ.ಕೆ, ಕಲಾವತಿ.ಕೆ, ಪಾರ್ವತಿ.ಹೆಚ್, ಚಾಂದ್‌ಬಾಗ್, ಸಂಗಮೇಶಾ.ಕೆ, ಶೋಭಾ.ಕೆ, ಸಿದ್ದರಾಮ.ಹೆಚ್, ಗುರುಸಿದ್ದಯ್ಯ.ಎಂ., ಸಿದ್ದರಾಮ.ಎನ್, ಸಾವಿತ್ರಿ.ಪಿ ಹಾಗೂ ಸಿಂಧುಬಾಯಿ.ಪಿ ಇವರುಗಳ ಹೇಳಿಕೆಯನ್ನು ಒಟ್ಟಾರೆಯಾಗಿ ನಿ.ಪಿ.7, ಎಸ್.ಪಿ.ರವರ ಪತ್ರ ದಿ: 21/12/2013ರನ್ನು – ನಿ.ಪಿ. 8 ಎಂದು ಗುರುತಿಸಿರುತ್ತಾರೆ.

15. ಆ.ಸ.ನೌ ರವರಾದ ಶ್ರೀಮತಿ ಪಿ.ಎ. ಕುಂಬಾರ ಇವರು ಡಿ.ಬ್ಲ್ಯೂ–1 ಎಂದು ಹಾಗೂ ಶ್ರೀ ರಾಜಕುಮಾರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರು ಡಿ.ಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ ನಿ.ಡಿ. 3 ರವರೆಗೆ ಅಂದರೆ ದಿನಾಂಕ: 6/4/2008ರ ಗ್ರಾಮ ಸಭೆಯ ನಡವಳಿಯನ್ನು– ನಿ.ಡಿ.1, ದಿನಾಂಕ: 20/5/2009ರ ಗ್ರಾಮ ಸಭೆಯ ನಡವಳಿಯನ್ನು– ನಿ.ಡಿ.2, ಕಮಿಟಿ ಪುಸ್ತಕದ ಮೂರು ಹಾಳೆಯನ್ನು ಒಟ್ಟಾರೆಯಾಗಿ ನಿ.ಡಿ.3 ಎಂದು ಗುರುತಿಸಿರುತ್ತಾರೆ.

8/12

16. ದೂರುದಾರರ ಆಪಾದನೆ ಮತ್ತು ಆ.ಸ.ನೌರವರ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ, ಆ.ಸ.ನೌರವರು ಬರಡೋಲಾ ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆಯಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಈಗಾಗಲೇ ಮನೆಗಳನ್ನು ಹೊಂದಿದ್ದ ಜನರಿಗೆ ಹಾಗೂ ಶ್ರೀಮಂತರಿಗೆ ಫಲಾನುಭವಿಗಳು ಅಂತ ಆಯ್ಕೆ ಮಾಡಿ ಅವರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ಮಂಜೂರು ಮಾಡಿ ಹಾಗೂ ಅವರಿಗೆ ಹಣ ಪಾವತಿಸಿ ಅವ್ಯವಹಾರ ಮಾಡಿ ಕರ್ತವ್ಯ ಲೋಪವರೆಸಗಿರುವುದು ದುರ್ನಡತೆ ಎಂದು ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ನಿಯಮ 3(1)ರ ಅಡಿಯಲ್ಲಿ ದುರ್ವತನೆ ಎಸಗಿರುವುದನ್ನು ರುಜುವಾತು ಪಡಿಸಬೇಕಾಗಿರುತ್ತದೆ.

17. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2012ರ ಸಾಲಿನಲ್ಲಿ ಬರಡೋಲಾ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದೆ; ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದ ಅಡಿಯಲ್ಲಿ ಬರುವ ಇಂದಿರಾ ಆವಾಸ, ಅಂಬೇಡ್ಕರ್ ಆವಾಸ ಹಾಗೂ ಆಶ್ರಯ ಮನೆಗಳ ಯೋಜನೆಯಲ್ಲಿ ಈಗಾಗಲೇ ಮನೆಗಳನ್ನು ಹೊಂದಿದವರಿಗೆ, ವಿಧುರರ ಮೀಸಲಾತಿಯಲ್ಲಿ ವಿವಾಹಿತರಿಗೆ, ಸರ್ಕಾರಿ ನೌಕರರಿಗೆ, ಶ್ರೀಮಂತರಿಗೆ ಹಾಗೂ ಬುಡ ಹಿಂದುಳಿದ ಸದಸ್ಯರಿಗೆ ಮನೆಗಳನ್ನು ಮಂಜೂರು ಮಾಡಿರುತ್ತಾರೆ. ಫಲಾನುಭವಿಗಳ ಪೈಕಿ, ಶ್ರೀ ಸಿದ್ದಪ್ಪ ತುಕರಾಂ, ಮಾಡೆಪ್ಪ, ದುಂಡಪ್ಪ ಬಿರಾದರ, ಸಂಗಪ್ಪ ಪ್ರಹ್ಲಾದ ಕಾಳೆದಾರ ರವರುಗಳಿಗೆ ಮದುವೆಯಾಗಿಲ್ಲದಿದ್ದರೂ ಸಹ ವಿಧುರರ ಮೀಸಲಾತಿಯಲ್ಲಿ ಮನೆಗಳನ್ನು ಮಂಜೂರು ಮಾಡಿರುತ್ತಾರೆ. ಮುಂದುವರೆದು, ಚಂದ್ರಭಾಗ ವಿಠ್ಠಲ ಹೊಸ ಒಕ್ಕಲಿಗ, ವಿಠಲಾಬಾಯಿ ಹುಗಾರ ಮತ್ತು ಗೌರಮ್ಮ ತುಕರಾಂ ಚೌದರಿ ರವರು ಮತ್ತು ಇತರರು ಒಂದೇ ಕುಟುಂಬದ ಸದಸ್ಯರಾಗಿದ್ದರೂ ಮನೆಗಳನ್ನು ಮಂಜೂರು ಮಾಡಿರುತ್ತಾರೆ. ಮುಂದುವರೆದು, ದಮಯಂತಿ, ಗುರುನಾಥ ಕುಲಕರ್ಣಿ, ದುಂಡು ಇಸೂರ ಸರ್ಕಾರಿ ನೌಕರರಾಗಿದ್ದರೂ ಮನೆಗಳನ್ನು ಮಂಜೂರು ಮಾಡಿರುತ್ತಾರೆ ಮತ್ತು ಶ್ರೀಮಂತರಿಗೆ ಹಾಗೂ ಅಂಬಾಡ ಭೀಮರಾಯ ಪಾವರ ರವರು ಮಾಜಿ ಸೈನಿಕರಲ್ಲದಿದ್ದರೂ, ಮಾಜಿ ಸೈನಿಕರ ಮೀಸಲಾತಿಯಲ್ಲಿ ಮನೆ ಹಂಚಿಕೆ

ಮಾಡಿದ್ದ ಕಾರಣ ನಿ.ಪಿ.1 ರಿಂದ ನಿ.ಪಿ.3 ರಂತೆ ದೂರು ಹಾಗೂ ನಿ.ಪಿ.5 ರಂತೆ ಪ್ರತ್ಯುತ್ತರವನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ.

18. ಈ ಪ್ರಕರಣದಲ್ಲಿ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದಂತೆ, ತನಿಖೆ ನಡೆಸಿ ವರದಿಯನ್ನು ನಿ.ಪಿ.6ರಂತೆ ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ;

> "ಅರ್ಜಿಯಲ್ಲಿ ನಮೂದ ಇದ್ದ ವಿಷಯದ ಬಗ್ಗೆ ನಾವು ಇಲ್ಲಿಯವರೆಗೆ ವಿಚಾರಣೆ ಮಾಡಿದ್ದರ ಮೇಲಿಂದ, ಸಾಕ್ಷಿದಾರರ ಹೇಳಿಕೆಯ ಅನುಸಾರ, ಸ್ಥಾನಿಕ ಚೌಕಸಿ ಮತ್ತು ದಾಖಲೆಗಳಿಂದ ಕಂಡು ಬಂದಿರುವುದು ಏನೆಂದರೆ, ಶ್ರೀ ಎಸ್.ಜಿ. ಕಲಾವಂತ ರವರು ದಿನಾಂಕ: 25/7/2008 ರಿಂದ 9/6/2010 ರವರೆಗೆ ಶ್ರೀಮತಿ ಪಿ.ಎ. ಕುಂಬಾರ ರವರು 10/06/2010 ರಿಂದ ಇಲ್ಲಿಯವರೆಗೆ ಬರಡೋಲ ಗ್ರಾಮ ಪಂಚಾಯತ್ ಪಿ.ಡಿ.ಓ. ಅಂತ ಕರ್ತವ್ಯ ನಿರ್ವಹಣೆ ಮಾಡಿದ ಬಗ್ಗೆ ಕಂಡು ಬಂದಿರುತ್ತದೆ. ಅದರಂತೆ ಸನ್ 2009 ರಿಂದ 2012 ರವರೆಗೆ ಬರಡೋಲ ಗ್ರಾಮ ಪಂಚಾಯತ ಅಧ್ಯಕ್ಷರು ಅಂತಾ 1) ಶ್ರೀಮತಿ ಎಂ.ವಿ. ಬೆಳ್ಳುಂಡಗಿ 2) ಶ್ರೀಮತಿ ಮಾನಂದ ಬಿರಾದಾರ 3) ಶ್ರೀ ಟಿ.ವ್ಹಿ. ಸಿಂಧೆ 4) ಶ್ರೀಮತಿ ಲಕ್ಷ್ಮೀಬಾಯಿ ಪವಾರ ಇವರುಗಳು ಕೆಲಸ ಮಾಡಿದ ಬಗ್ಗೆ ತಿಳಿದ ಬಂದಿರುತ್ತದೆ. ಬರಡೋಲ ಗ್ರಾಮ ಪಂಚಾಯತ್ ಮೇಲ್ಕಂಡ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕೂಡಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅವ್ಯವಹಾರ ಮಾಡಿ ಗುಡಿಸಲು ವಾಸಿಗಳಿಗೆ ಮಾತ್ರ ಕೊಡಬೇಕಾದ ಸರ್ಕಾರಿ ಮನೆಗಳನ್ನು ಈಗಾಗಲೇ ಮನೆಗಳನ್ನು ಹೊಂದಿದ ಜನರಿಗೆ ಹಾಗೂ ಶ್ರೀಮಂತರಿಗೆ ಫಲಾನುಭವಿಗಳು ಅಂತಾ ಆಯ್ಕೆ ಮಾಡಿ ಅವರ ಹೆಸರಿನಿಂದ ಮನೆಗಳನ್ನು ಮಂಜೂರು ಮಾಡಿದ ಬಗ್ಗೆ ಖಚಿತವಾಗಿದ್ದು ಇರುತ್ತದೆ. ಗ್ರಾಮ ಪಂಚಾಯತ್ ಅಧಿಕಾರಿಗಳು ನಿರ್ವಹಣೆ ಮಾಡುವ ಫಲಾನುಭವಿಗಳ ಹೆಸರಿನಲ್ಲಿ ಇರುವ ಕಡತಗಳ ಪರಿಶೀಲನೆ ಮಾಡಲಾಗಿ ಕಡತಗಳ ಯಾವ ಪುಟಗಳನ್ನು ಕಾಲಂ ಪ್ರಕಾರ ಸರಿಯಾಗಿ

(signature) 8/18

ತುಂಬದೇ ಹಾಗೆಯೇ ಖಾಲಿ ಬಿಟ್ಟು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸಂದಾಯವಾದ ಹಣದ ಬಗ್ಗೆ ಸಹ ಸರಿಯಾಗಿ ರಕಂ ನಮೂದ ಮಾಡಿರುವುದಿಲ್ಲಾ. ಫಲಾನುಭವಿಗಳಿಗೆ ಹಂಚಿಕೆ ಆದ ಮನೆಗಳು ಸಹ ನಿಯಮಾನುಸಾರ ಕಟ್ಟಿಸದೇ ತಮ್ಮ ಮನಸ್ಸಿಗೆ ಬಂದ ಹಾಗೆ ಕಟ್ಟಿಸಿಕೊಂಡಿರುತ್ತಾರೆ. ಮನೆಗಳು ಪೂರ್ಣವಾದ ಬಗ್ಗೆ ಸಂಬಂಧಪಟ್ಟ ಅಭಿಯಂತರರಿಂದ ಪ್ರಮಾಣ ಪತ್ರ ಪಡೆದುಕೊಂಡಿರುವುದಿಲ್ಲಾ. ಈ ಯೋಜನೆಯ ಮೇಲ್ವಿಚಾರಣೆ ಮಾಡಬೇಕಾದ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್, ಇಂಡಿ ಇವರುಗಳು ಸರಿಯಾಗಿ ಕಾರ್ಯನಿರ್ವಹಣೆ ಮಾಡದೇ ಇರುವ ಬಗ್ಗೆ ಖಚಿತವಾಗಿದ್ದು ಇರುತ್ತದೆ. ಅರ್ಜಿಯಲ್ಲಿಯ ವಿಷಯ ನಿಜ ಇದ್ದ ಬಗ್ಗೆ ಸಾಕ್ಷ್ಯಾದಾರದಿಂದ ದೃಢಪಟ್ಟಿರುತ್ತದೆ. ಕಾರಣ ಬರಡೋಲ ಗ್ರಾಮ ಪಂಚಾಯಿತಿಯ ಮೇಲ್ಕಂಡ ಅಧಿಕಾರಿಗಳು, ಜನ ಪ್ರತಿನಿಧಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಇಂಡಿ ಇವರುಗಳ ವಿರುದ್ಧ ಸೂಕ್ತ ಕ್ರಮಕ್ಕಾಗಿ ಕೋರಲಾಗಿದೆ"

19. ತನಿಖಾಧಿಕಾರಿಯು, ತನಿಖಾ ವರದಿಯೊಂದಿಗೆ – ಜಯರಾಮ ಎಂ.ಸಿ, ವಿಮಲಾಬಾಯಿ.ಕೆ, ಕಲಾವತಿ.ಕೆ, ಪಾರ್ವತಿ.ಹೆಚ್, ಚಾಂದ್‌ಬಾಗ್, ಸಂಗಮೇಶಾ.ಕೆ, ಶೋಭಾ.ಕೆ, ಸಿದ್ದರಾಮ.ಹೆಚ್, ಗುರುಸಿದ್ದಯ್ಯ.ಎಂ., ಸಿದ್ದರಾಮ.ಎನ್, ಸಾವಿತ್ರಿ.ಪಿ ಹಾಗೂ ಸಿಂಧುಬಾಯಿ.ಪಿ ಇವರುಗಳ ಹೇಳಿಕೆಯನ್ನು ಒಟ್ಟಾರೆಯಾಗಿ ನಿ.ಪಿ.7 ರಂತೆ ಸಲ್ಲಿಸಿರುತ್ತಾರೆ.

20. ಆ.ಸ.ನೌರವರು ಈ ಪ್ರಾಧಿಕಾರದ ಮುಂದೆ ಸಾಕ್ಷ್ಯ ನುಡಿದಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 10/6/2010 ರಿಂದ 23/10/2013 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬರಡೋಲಾ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅಂದರೆ ಕರ್ತವ್ಯಕ್ಕೆ ವರದಿ ಮಾಡುವ ಮೊದಲೇ ಫಲಾನುಭವಿಗಳನ್ನು 2008–09, 2009–2010ರಲ್ಲಿ ನಿ.ಡಿ.1 ರಿಂದ ನಿ.ಪಿ. 3 ರಂತೆ ಆಯ್ಕೆ ಮಾಡಲಾಗಿರುತ್ತದೆ; ಆ ಪೈಕಿ ನಿಯಮಾನುಸಾರ 4 ಜನ ಫಲಾನುಭವಿಗಳಿಗೆ ಅಂದರೆ ಶ್ರೀಮತಿ ಸಾವಿತ್ರಿ ಶಂಕರ ಪಾವರ,

28/12

ಶ್ರೀಮತಿ ಸಿಂಧುಬಾಯ ಡಿ. ಪಾವರ, ಶ್ರೀಮತಿ ವಿಮಲಬಾಯಿ ಎಲ್ ಕಟ್ಟಿಮನಿ ಹಾಗೂ ಶ್ರೀಮತಿ ಕಲಾವತಿ ಎಸ್. ಕಟ್ಟಿಮನಿ ರವರಿಗೆ ಹಣ ಬಿಡುಗಡೆ ಮಾಡಿದ್ದು, ಯಾವುದೇ ಕರ್ತವ್ಯ ಲೋಪವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ.

21. ಅದೇ ರೀತಿ ಆ.ಸ.ನೌ ರವರು ತಮ್ಮ ಪರವಾಗಿ ಡಿ.ಬ್ಲ್ಯೂ.2 ಶ್ರೀ ರಾಜಕುಮಾರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿದ್ದು, ಸದರಿಯವರು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ, ತಾವು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಇಂಡಿ, ವಿಜಯಪುರ ಜಿಲ್ಲೆಯಲ್ಲಿ ದಿನಾಂಕ: 10/09/2018 ರಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾಗಿ ಕೆಲಸ ನಿರ್ವಹಿಸಿದ್ದು, ಅದಕ್ಕಿಂತ ಪೂರ್ವದಲ್ಲಿ ದಿನಾಂಕ: 28/8/2009 ರಿಂದ 9/12/2010ರವರೆಗೆ ತಾಲ್ಲೂಕು ಪಂಚಾಯತ್ ಇಂಡಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಆ.ಸ.ನೌರವರು ಬರಡೋಲಾ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಆ ವೇಳೆಯಲ್ಲಿ ಅಂದರೆ 2008–2009ನೇ ಸಾಲಿನ ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ 14 ಫಲಾನುಭವಿಗಳು ದಿನಾಂಕ: 6/4/2008 ರಂದು ಜರುಗಿದ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಗಿದೆ ಮತ್ತು 2009–10 ಸಾಲಿನ ಇಂದಿರಾ ಆವಾಸ ಯೋಜನೆ ಅಡಿಯಲ್ಲಿ 32 ಫಲಾನುಭವಿಗಳನ್ನು ದಿನಾಂಕ: 20/5/2009ರಂದು ಜರುಗಿದ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿರುತ್ತದೆ. ಈ ಎರಡು ಗ್ರಾಮ ಸಭೆಗಳನ್ನು ಆಗಿನ ಬರಡೋಲಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ವಿಠಲ ಬೆಳ್ಳುಂಡಗಿ ಹಾಗೂ ಆಗಿನ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾದ ಶ್ರೀ ಎಸ್.ಸಿ. ಕಳಾವಂತ ಇವರ ಹಾಜರಾತಿ ಹಾಗೂ ಅಧ್ಯಕ್ಷತೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಆದ್ದರಿಂದ ಈ ಸದರಿ ಫಲಾನುಭವಿಗಳನ್ನು ಆ.ಸ.ನೌ ರವರು ಆಯ್ಕೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

೭೮|೧೭

22. ಸಾಕ್ಷಿದಾರರ ಸಾಕ್ಷಿ, ಗುರುತಿಸಿರುವ ದಾಖಲೆಗಳನ್ನು ಹಾಗೂ ಕಡತದಲ್ಲಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಇಂಡಿ ತಾಲ್ಲೂಕು ಪೈಕಿ ಬರಡೂಲ ಗ್ರಾಮ ಪಂಚಾಯಿತಿ ವತಿಯಿಂದ ಸನ್ 2009-10, 2010-11 & 2011-12ನೇ ಸಾಲಿನಲ್ಲಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ಅಡಿಯಲ್ಲಿ ಬರುವ ಇಂದಿರಾ ಆವಾಸ, ಆಶ್ರಯ, ಅಂಬೇಡ್ಕರ್ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಿರುತ್ತಾರೆ. ತನಿಖಾಧಿಕಾರಿಯು ವರದಿಯಲ್ಲಿ ತಿಳಿಸಿದಾಗ 12 ಜನ ಫಲಾನುಭವಿಗಳನ್ನು ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಫಲಾನುಭವಿಗಳನ್ನು ನಿ.ಡಿ.1 ರಿಂದ ನಿ.ಡಿ. 3 ರಂತೆ ಆಯ್ಕೆ ಮಾಡಿದ ವಿವರ ಈ ಕೆಳಕಂಡಂತೆ ಇರುತ್ತದೆ.

ಗ್ರಾಮ ಪಂಚಾಯತ್ ಕಾರ್ಯಾಲಯ ಬರಡೋಲ

| ಅ.ನಂ. | ಫಲಾನುಭವಿಯ ಹೆಸರು | ಯೋಜನೆಯ ಹೆಸರು | ಮಂಜೂರಾದ ವರ್ಷ |
|---|---|---|---|
| 1. | ವಿಮಲಾಬಾಯಿ ಲ ಕಟ್ಟಿಮನಿ | ಅಂಬೇಡ್ಕರ್ | 2008/09 |
| 2. | ಕಲಾವತಿ ಸಿ ಕಟ್ಟಿಮನಿ | ಇಂದಿರಾ ಆವಾಸ್ | 2009/10 |
| 3. | ಪಾರ್ವತಿ ಬಾ ಹಾವಿನಾಳ | ಅಂಬೇಡ್ಕರ್ | 2008/09 |
| 4. | ಚಂದ್ರಬಾಗಾ ವಿ ಹೋಸವಕ್ಕಲಿಗ | ಇಂದಿರಾ ಆವಾಸ್ | 2008/09 |
| 5. | ಸಂಗಮೇಶ ಪ್ರ ಕಾಳೆ | ಇಂದಿರಾ ಆವಾಸ್ | 2009/10 |
| 6. | ಶೋಭಾ ಅ ಕಾಳೆ | ಅಂಬೇಡ್ಕರ್ | 2008/09 |
| 7. | ಸಿದ್ರಾಮ ದ ಹೂಗಾರ | ಇಂದಿರಾ ಆವಾಸ್ | 2008/09 |
| 8. | ಗುರುಸಿದ್ದಯ್ಯ ಸಿ ಮಠಪತಿ | ಇಂದಿರಾ ಆವಾಸ್ | 2007/08 |
| 9. | ಸಿದ್ರಾಮ ಲ ನಾಗೇನವರ | ಇಂದಿರಾ ಆವಾಸ್ | 2008/09 |
| 10. | ಸಾವಿತ್ರಿ ಶ ಪವಾರ | ಇಂದಿರಾ ಆವಾಸ್ | 2009/10 |
| 11. | ಸಿಂಧೂಬಾಯಿ ದಾ ಪವಾರ | ಇಂದಿರಾ ಆವಾಸ್ | 2009/10 |
| 12. | ಅಂಭವ ಭೀ ಪವಾರ | ಇಂದಿರಾ ಆವಾಸ್ | 2009/10 |

23. ಅಂದರೆ, ಸದರಿ 12 ಜನ ಫಲಾನುಭವಿಗಳ ಆಯ್ಕೆಯು ಸನ್ 2008-09 ಮತ್ತು 2009-10ರ ಸಾಲಿನಲ್ಲಿ ಬರಡೋಲ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ

2 8/12

ಆಯ್ಕೆ ಮಾಡಿದ್ದು, ಆ.ಸ.ನೌ ರವರು ದಿನಾಂಕ: 10/6/2010 ರಿಂದ ಅಕ್ಟೋಬರ್ 2013 ರವರೆಗೆ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವ ಅವಧಿಯಲ್ಲಿ ಆಗಿರುವುದಿಲ್ಲ ಮತ್ತು ಅವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲು ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆಯನ್ನು ಮಂಜೂರು ಮಾಡಿರುತ್ತದೆ. ತನಿಖಾಧಿಕಾರಿಯ ಮುಂದೆ ಜಯರಾಮ ಎಂ.ಸಿ, ವಿಮಲಾಬಾಯಿ.ಕೆ, ಕಲಾವತಿ.ಕೆ, ಪಾರ್ವತಿ.ಹೆಚ್, ಚಾಂದ್‌ಬಾಗ್, ಸಂಗಮೇಶಾ.ಕೆ, ಶೋಭಾ.ಕೆ, ಸಿದ್ದರಾಮ.ಹೆಚ್, ಗುರುಸಿದ್ದಯ್ಯ.ಎಂ., ಸಿದ್ದರಾಮ.ಎನ್, ಸಾವಿತ್ರಿ.ಪಿ ಹಾಗೂ ಸಿಂಧುಬಾಯಿ.ಪಿ ಇವರುಗಳ ಹೇಳಿಕೆಯನ್ನು ಒಟ್ಟಾರೆಯಾಗಿ ನಿ.ಪಿ.7 ರಂತೆ ಹೇಳಿಕೆಯನ್ನು ನೀಡಿದ್ದು, ಶ್ರೀ ಜಯರಾಮ ರವರು ತಮ್ಮ ಹೇಳಿಕೆಯಲ್ಲಿ ಈ ರೀತಿ ಹೇಳಿರುತ್ತಾರೆ;

> ‘ಗ್ರಾಮ ಪಂಚಾಯಿತಿ ವತಿಯಿಂದ ಅಂಬೇಡ್ಕರ್ ಯೋಜನೆ, ಆಶ್ರಯ ಯೋಜನೆ, ಇಂದಿರಾ ಆವಾಸ್ ಯೋಜನೆ ವಿವಿಧ ಯೋಜನೆಯಲ್ಲಿ ನಿಯಮಾನುಸಾರ ವಾರ್ಡ ಸಭೆ, ಗ್ರಾಮ ಸಭೆ ಮತ್ತು ಸಾಮಾನ್ಯ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ನಮ್ಮ ಕಡೆಗೆ ಸಂಬಂಧ ದಾಖಲಾತಿಗಳನ್ನು ಕಳಿಸುತ್ತಿದ್ದು, ತಾಲ್ಲೂಕು ಮಟ್ಟದಲ್ಲಿ ಒಂದು ಜಾಗ್ರತಾ ಸಮಿತಿ ಇದ್ದು, ಸ್ಥಳೀಯ ಶಾಸಕರು ಈ ಸಮಿತಿಯ ಅಧ್ಯಕ್ಷರು ಆಗಿರುತ್ತಾರೆ. ನಾವು ಸದರ ಸಮಿತಿಗೆ ಸದಸ್ಯ ಕಾರ್ಯದರ್ಶಿ ಅಂತಾ ಇರುತ್ತೇವೆ. ಈ ಸಮಿತಿಯಲ್ಲಿ ಅರ್ಹ ಫಲಾನುಭವಿಗಳ ಬಗ್ಗೆ ಪರಿಶೀಲಿಸಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಜಾಪುರ ಇವರಿಗೆ ಅನುಮೋದನೆಗಾಗಿ ಪ್ರಸ್ತಾವನೆ ಕಳಿಸುತ್ತೇವೆ. ನಂತರ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ಪಡೆದು ಸಂಬಂಧಪಟ್ಟ ನಿಗಮಕ್ಕೆ ಅಚಿತಿಮ ಅನುಮೋದನೆಗಾಗಿ ಕಳಿಸಿರುತ್ತಾರೆ. ನಿಮಗದಲ್ಲಿ ಅಂತಿಮ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ಪಂಚಾಯತಿಗೆ ಮಂಜೂರಾತಿ ಆದ ಫಲಾನುಭವಿಗಳ ಪಟ್ಟಿ ಕಳಿಸಿ ಕೊಡುತ್ತಾರೆ. ತದನಂತರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಥವಾ ಪಿ.ಡಿ.ಓ ರವರು ಸಂಬಂಧಪಟ್ಟ ದಾಖಲಾತಿಗಳನ್ನು ದಾಖಲೆ ರಜಿಸ್ಟೇಶನ್ ಮಾಡಿ

28/12

ಕಾಮಗಾರಿಯ ಆದೇಶವನ್ನು ನೀಡುತ್ತಾರೆ. ಸದರಿ ಫಲಾನುಭವಿಗಳು 90 ದಿವಸಗಳಲ್ಲಿ ಮನೆಯನ್ನು ಪೂರ್ವಗೊಳಿಸಲು ಈ ಯೋಜನೆಯಲ್ಲಿ ಅವಕಾಶ ಇರುತ್ತದೆ. ಸದರಿ ಮನೆಗಳನ್ನು ಕಟ್ಟಲು 4 ಹಂತದಲ್ಲಿ ಅಂದರೆ 1) ಮನೆಯ ತಳಪಾಯ 2) ಪ್ಲಿಂತ್ 3) ಲಿಂಟಲ್ 4) ಪೂರ್ಣ ಮನೆ ಈ ಪ್ರಕಾರ ಹಣವನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ಚಕ್ಕ ಮುಖಾಂತರ ಮಾಡಲಾಗುತ್ತದೆ ಹಾಗೂ ಅಭಿಯಂತರರ ಕಡೆಯಿಂದ ಕಟ್ಟಿದ ಮನೆಗಳು ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ಪಡೆದುಕೊಳ್ಳವರು ಹಾಗೂ ಈ ಯೋಜನೆಯ ಮೇಲ್ವಿಚಾರಣೆ ಮಾಡುವ ಕಾರ್ಯನಿರ್ವಾಹಕ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ'.

24. ಆ.ಸ.ನೌ ರವರು ತಮ್ಮ ಆಕ್ಷೇಪಣೆ, ಲಿಖಿತ ಪತ್ರ ಹಾಗೂ ಮುಖ್ಯ ಸಾಕ್ಷ್ಯದಲ್ಲಿ ಹೇಳಿದಂತೆ, 12 ಜನ ಫಲಾನುಭವಿಗಳ ಪೈಕಿ, 4 ಜನ ಅಂದರೆ ಶ್ರೀಮತಿ ಸಾವಿತ್ರಿ ಶಂಕರ ಪಾವರ, ಶ್ರೀಮತಿ ಸಿಂಧುಬಾಯ ಡಿ. ಪಾವರ, ಶ್ರೀಮತಿ ವಿಮಲಬಾಯಿ ಎಲ್ ಕಟ್ಟಿಮನಿ ಹಾಗೂ ಶ್ರೀಮತಿ ಕಲಾವತಿ ಎಸ್. ಕಟ್ಟಿಮನಿ ಫಲಾನುಭವಿಗಳಿಗೆ ವಿವಿಧ ದಿನಾಂಕದಂದು ಹಣ ಬಿಡುಗಡೆ ಮಾಡಿರುತ್ತಾರೆ. ಆ ನಾಲ್ಕು ಜನ ಫಲಾನುಭವಿಗಳ ಬಗ್ಗೆ, ಪಿ.ಡಬ್ಲ್ಯೂ-1, 2 ಮತ್ತು ಶಿಸ್ತು ಪ್ರಾಧಿಕಾರದ ಆರೋಪವೇನೆಂದರೆ, ಆ.ನಂ.1, 2, 3, 4ನೇದ್ದರೂ ಈಗಾಗಲೇ ತಮ್ಮ ತಮ್ಮ ಜಾಗೆಯಲ್ಲಿ ಮನೆಗಳನ್ನು ಹೊಂದಿದ್ದರೂ ಸಹಿತ ವಸತಿರಹಿತರು ಅಂತಾ ಪರಿಗಣಿಸಿ ಮನೆಗಳನ್ನು ಮಂಜೂರು ಮಾಡಿ ಹಣ ಬಿಡುಗಡೆ ಮಾಡಿ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಅಲ್ಲದೇ ಅ.ನಂ. 10 ಮತ್ತು 11ನೇದ್ದವರೂ ಸಾಕಷ್ಟು ಶ್ರೀಮಂತರು ಹಾಗೂ ವಾಣಿಜ್ಯ ಬೆಳೆಯನ್ನು ಬೆಳೆಯುತ್ತಿದ್ದರು, ಫಲಾನುಭವಿಗಳಾಗಿ ಆಯ್ಕೆ ಮಾಡಿ ಹಣ ಬಿಡುಗಡೆ ಮಾಡಿರುತ್ತಾರೆಂದು ಆರೋಪಿಸಿರುತ್ತಾರೆ. ಈ ಬಗ್ಗೆ ಆ.ಸ.ನೌ ರವರು ತಮ್ಮ ಲಿಖಿತ ಪತ್ರದಲ್ಲಿ ವಿವರಣೆಯನ್ನು ಈ ರೀತಿ ನೀಡಿರುತ್ತಾರೆ;

'ಶ್ರೀ ಸಂಗಮೇಶ್ ಹಾಗೂ ಶೋಭಾ ಇಬ್ಬರು ಜಾತಿಯಿಂದ ಪರಿಶಿಷ್ಟರಾಗಿದ್ದು, ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದರು, ಒಂದೇ ಕುಟುಂಬದಲ್ಲಿ 18 ಜನ ವಾಸವಾಗಿದ್ದರು,

28/12

ಮೇಲ್ ಛಾವಣಿಯವರೆಗೆ ಮನೆಯನ್ನು ನಿರ್ಮಾಣ ಮಾಡಿಕೊಂಡಿದ್ದರು, ಕೊನೆಯ ಹಂತದ ಚೆಕ್‌ನ್ನು ಮಾತ್ರ ಪಂಚಾಯಿತಿಯ ಅನುಮತಿ ಮೇರೆಗೆ ನೀಡಿರುತ್ತೇನೆ. ಆದರೆ 2009-10ರಲ್ಲಿ ಉತ್ತರ ಕರ್ನಾಟಕ ಜಾಗದಲ್ಲಿ ಸೆಪ್ಟೆಂಬರ್‌ನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹಾನಿಯಾಗಿರುವುದು ಸತ್ಯದಿಂದ ಕೂಡಿರುತ್ತದೆ. ಶ್ರೀಮತಿ ಹಿಂದುಬಾಯಿ ದಾಮಾಜಿ ಪವಾರ ಸದರಿಯವರು ಫಲಾನುಭವಿ ಅಂತಾ ಆಯ್ಕೆಯಾಗುವಾಗ ನಿಯಮಾನುಸಾರ ಗ್ರಾಮ ಸಭೆಯಲ್ಲಿ ಆಯ್ಕೆಯಾಗಿರುತ್ತಾರೆ. ವಾಸಿಸಲು ಯೋಗ್ಯವಲ್ಲದ ಕಚ್ಚಾ ಮನೆಗಳಲ್ಲಿ ವಾಸವಾಗಿದ್ದರು ಸದರಿಯವರು ಈ ಮೊದಲು ಒಣ ಬೇಸಾಯ ಮಾಡುತ್ತಿದ್ದರು. ಮುಂಬರುವ ದಿನಗಳಲ್ಲಿ ತಮ್ಮ ಜೀವನಮಟ್ಟ ಸುಧಾರಿಸಿಕೊಳ್ಳಲು ಬ್ಯಾಂಕ್‌ಗಳಿಂದ ಸಾಲ ಪಡೆದು ದ್ರಾಕ್ಷಿ ಮತ್ತು ದಾಳಿಂಬೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದರು'.

ಇದರಿಂದ ಕಂಡು ಬರುವ ಅಂಶವೇನೆಂದರೆ, ಅ.ನಂ.1, 2 ನೇದ್ದವರಿಗೆ ಈಗಾಗಲೇ ತಮ್ಮ ಸ್ವಂತ ಜಾಗೆಯಲ್ಲಿ ಮನೆಗಳನ್ನು ಹೊಂದಿದ್ದರು, ವಸತಿರಹಿತರು ಅಂತ ಪರಿಗಣಿಸಿ ಆಯ್ಕೆ ಮಾಡಿದರೂ ಸಹ, ಹಂತ ಹಂತವಾಗಿ ಪರಿಶೀಲನೆ ಮಾಡುವಾಗ, ಅದರ ಬಗ್ಗೆ ವರದಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಬೇಕಾಗಿರುವುದು ಆ.ಸ.ನೌ.ರ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಆ.ಸ.ನೌ ಆ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡದೇ, ವಿವಿಧ ದಿನಾಂಕದಂದು ಹಣ ಬಿಡುಗಡೆ ಮಾಡಿ ಕರ್ತವ್ಯ ಲೋಪವೆಸಗಿರುವುದು ಕಂಡು ಬರುತ್ತದೆ. ಅಲ್ಲದೇ ಅ.ನಂ. 10 ಮತ್ತು 11ನೇದ್ದರೂ 10-12 ಎಕರೆ ಜಮೀನು ಹೊಂದಿದ್ದರೂ ಸಹ ಮೇಲಾಧಿಕಾರಿಯವರಿಗೆ ತಕರಾರು ವರದಿ (decent note) ಸಲ್ಲಿಸದೇ, ಸದರಿಯವರಿಗೆ ವಿವಿಧ ದಿನಾಂಕದಂದೂ ಆ.ಸ.ನೌ ರವರು ಹಣ ಬಿಡುಗಡೆ ಮಾಡಿ ಕರ್ತವ್ಯ ಲೋಪವೆಸಗಿರುವುದು ಕಂಡು ಬರುತ್ತದೆ.

08/12

25. ಆ.ಸ.ನಾ ರವರು ತಮ್ಮ ಆಕ್ಷೇಪಣೆಯೊಂದಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ 4 ಜನ ಫಲಾನುಭವಿಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿರುತ್ತಾರೆ.

| ಅ.ನಂ. | ಫಲಾನುಭವಿಗಳ ಹೆಸರು | ಹಣ ಬಿಡುಗಡೆ ಮಾಡಿದ ದಿನಾಂಕ | ಬಿಡುಗಡೆ ಮಾಡಿದ ಮೊತ್ತ |
|---|---|---|---|
| 1 | ವಿಮಲಾಬಾಯಿ ಲ ಕಟ್ಟಿಮನಿ | 31/3/2011<br>17/8/2011<br>15/10/2011. | 19800<br>9900<br>9900 |
| | | ಒಟ್ಟು ರೂ. | 39,600/- |
| 2 | ಕಲಾವತಿ ಸಿ. ಕಟ್ಟಿಮನಿ | 4/10/2010<br>30/10/2010<br>8/4/2011<br>2/8/2011 | 9900<br>9900<br>9900<br>9900 |
| | | ಒಟ್ಟು ರೂ. | 39,600/- |
| 10 | ಸಾವಿತ್ರಿ ಶಂಕರ ಪವಾರ | 12/10/2011<br>21/1/2012<br>22/5/2012 | 9900<br>9900<br>9900 |
| | | ಒಟ್ಟು ರೂ. | 29700/- |
| 11 | ಸಿಂದೂಬಾಯಿ ದಾ ಪವಾರ | 13/12/2011<br>21/1/2012<br>22/5/2012 | 9900<br>9900<br>9900 |
| | | ಒಟ್ಟು ರೂ. | 29,700/- |

26. ನಿ.ಪಿ.7 ರ ಪ್ರಕಾರ, ಅನುಮೋದನೆ ಪಡೆದ ಫಲಾನಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಪಂಚಾಯಿತಿಗೆ ಕಳುಹಿಸಿದ ನಂತರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಥವಾ ಪಿ.ಡಿ.ಓ. ರವರು ಸಂಬಂಧಪಟ್ಟ ದಾಖಲೆಗಳನ್ನು ರಿಜಿಸ್ಟರ್ ಮಾಡಿ ಕಾಮಗಾರಿಯ ಆದೇಶವನ್ನು ನೀಡುತ್ತಾರೆ, ಸದರಿ ಫಲಾನುಭವಿಗಳು 90 ದಿವಸದಲ್ಲಿ ಮನೆಯನ್ನು ಪೂರ್ಣಗೊಳಿಸಲು ಯೋಜನೆಯಲ್ಲಿ ಅವಕಾಶವಿರುತ್ತದೆ ಮತ್ತು ಮನೆಗಳನ್ನು ಕಟ್ಟಲು 4 ಹಂತದಲ್ಲಿ ಅಂದರೆ 1) ಮನೆಯ ತಳಪಾಯ 2) ಪ್ಲಿಂತ್ 3) ಲಿಂಟೆಲ್ 4) ಪೂರ್ಣಮನೆ ಈ ಪ್ರಕಾರ ಹಣವನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ಚೆಕ್ ಮುಖಾಂತರ ಸಂದಾಯ ಮಾಡಲಾಗುತ್ತದೆ ಹಾಗೂ ಅಭಿಯಂತರರ ಕಡೆಯಿಂದ ಕಟ್ಟಿದ ಮನೆಗಳನ್ನು ಪೂರ್ಣಗೊಮಡ ಬಗ್ಗೆ ಪ್ರಮಾಣ ಪತ್ರ ಪಡೆದುಕೊಳ್ಳುವುದು ಆಯಾ ಪಿ.ಡಿ.ಓ. ರವರ ಕರ್ತವ್ಯವಾಗಿರುತ್ತದೆ ಮತ್ತು

28/12

ಈ ಯೋಜನೆಗಳ ಪೂರ್ತಿ ಮೇಲ್ವಿಚಾರಣೆ ತಾಲ್ಲೂಕು ಪಂಚಾಯತ್ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಈ ಯೋಜನೆ ನಿಯಮಗಳ ಪ್ರಕಾರ, ಅಂದರೆ ಯೋಜನೆಯ ಪೂರ್ತಿ ಮೇಲ್ವಿಚಾರಣೆ ಆ.ಸ.ನೌ ರವರದ್ದಾಗಿರುವುದರಿಂದ, ಕಾಮಗಾರಿ ಆದೇಶ ನೀಡುವ ಮೊದಲು ತನ್ನ ಮೇಲಾಧಿಕಾರಿಗಳಿಗೆ, ಮೇಲ್ಕಾಣಿಸಿದ ನಾಲ್ಕು ಜನ ಫಲಾನುಭವಿಗಳ ಬಗ್ಗೆ ತಕರಾರು (decent note) ವರದಿಯನ್ನು ಅಂದರೆ ಅ.ನಂ.1, 2 ನೇದ್ದವರಿಗೆ ಈಗಾಗಲೇ ತಮ್ಮ ಸ್ವಂತ ಜಾಗೆಯಲ್ಲಿ ಮನೆಗಳನ್ನು ಹೊಂದಿರುತ್ತಾರೆ ಎಂದು ಹಾಗೂ ಅ.ನಂ. 10 ಮತ್ತು 11ನೇದ್ದರೂ 10–12 ಎಕರೆ ಜಮೀನು ಹೊಂದಿರುತ್ತಾರೆ ಎಂದು ಆ.ಸ.ನೌ ರವರು ಸಲ್ಲಿಸಿರುವುದಿಲ್ಲ. ಅಲ್ಲದೇ, ಹಂತ ಹಂತವಾಗಿ ಹಣ ಬಿಡುಗಡೆ ಮಾಡುವ ಕಾಲಕ್ಕೆ ಸಂಬಂಧಪಟ್ಟ ಅಭಿಯಂತರರವರ ಪ್ರಮಾಣ ಪತ್ರವನ್ನು ಮತ್ತು ಛಾಯಾಚಿತ್ರಗಳನ್ನು ಪಡೆದುಕೊಳ್ಳದೇ ಕರ್ತವ್ಯಲೋಪ ಎಸಗಿರುವುದು ಕಂಡು ಬರುತ್ತದೆ. ಮೇಲೆ ಚರ್ಚಿಸಿದಂತೆ, ನಾಲ್ಕು ಜನ ಫಲಾನುಭವಿಗಳಿಗೆ, ಆ.ಸ.ನೌ ರವರು 1) ಶ್ರೀಮತಿ ವಿಮಲಬಾಯಿ ಲಕ್ಷ್ಮಣ ಕಟ್ಟಿಮನಿ ರವರಿಗೆ **ರೂ. 39,600/–**, 2) ಶ್ರೀಮತಿ ಕಲಾವತಿ ಎಸ್. ಕಟ್ಟಮನಿ ರವರಿಗೆ **ರೂ. 39,600/–**, 3) ಶ್ರೀಮತಿ ಸಾವಿತ್ರಿ ಶಂಕರ ಪಾವರ ರವರಿಗೆ **ರೂ. 29,700/–** ಹಾಗೂ 4) ಶ್ರೀಮತಿ ಸಿಂಧುಬಾಯಿ ರಾಮೋಜಿ ಪವಾರ **ರೂ. 29,700/–** ಗಳನ್ನು ಮನೆ ಕಟ್ಟಿದ ಬಗ್ಗೆ ಖುದ್ದಾಗಿ ಪರಿಶೀಲಿಸಿ ಭೌತಿಕ ಪರಿಶೀಲನೆ ಮಾಡಿ ಮನೆ ಕಟ್ಟಿಸಿದಕ್ಕೆ ಹಂತ ಹಂತವಾರು ಅವರ ಖಾತೆಗೆ ಹಣವನ್ನು ಬಿಡುಗಡೆ ಮಾಡುವಾಗ ನಿಯಮಗಳನ್ನು ಸರಿಯಾಗಿ ಪಾಲಿಸದೇ ಅಂದರೆ **ರೂ. 1,38,600/–** ಗಳನ್ನು ಯೋಜನೆಯ ವಿರುದ್ಧವಾಗಿ ಬಿಡುಗಡೆ ಮಾಡಿ ಸರ್ಕಾರಕ್ಕೆ ನಷ್ಟವುಂಟು ಮಾಡಿರುತ್ತಾರೆ. ಸದರಿ ನಷ್ಟಕ್ಕೆ ಆ.ಸ.ನೌ ರವರು ಹೊಣೆಗಾರರಾಗಿರುತ್ತಾರೆ.

27. ಈ ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಗಾಗಿ ಆ.ಸ.ನೌಕರರ ವಿರುದ್ಧದ ಆರೋಪವನ್ನು ಶಿಸ್ತು ಪ್ರಾಧಿಕಾರದವರು ರುಜುವಾತು ಪಡಿಸಿರುತ್ತಾರೆಂದು ಅಭಿಪ್ರಾಯಿಸಿ, ಈ ಎಲ್ಲಾ ಕಾರಣಗಳಿಂದ ಅಂಶ–1 ಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

08/12

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**<u>ಆದೇಶ</u>**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರ–ಶ್ರೀಮತಿ ಪಿ.ಎ. ಕುಂಬಾರ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬರಡೋಲಾ, ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಮಾಡಲಾದ ಆರೋಪಗಳನ್ನು ಶಿಸ್ತು ಪ್ರಾಧಿಕಾರವು **ರುಜುವಾತು**ಪಡಿಸಲಾಗಿರುತ್ತದೆ ಹಾಗೂ ಆ.ಸ.ನೌ ರವರು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಹಣ ಅಂದರೆ **ರೂ. 1,38,600/–** ಗಳಿಗೆ ಹೊಣೆಗಾರರಾಗಿರುತ್ತಾರೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

8ನೇ ಡಿಸೆಂಬರ್ 2020

(ಪುಷ್ಪಾಂಜಲಿ. ಬಿ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಆ.ಸ.ನೌ ರವರ ನಿವೃತ್ತಿ ದಿ: 28/02/1943

**<u>ಅನುಬಂಧಗಳು</u>**

I. **<u>ಶಿಸ್ತು ಪ್ರಾಧಿಕಾರದ ಪರವಾಗಿ ನುಡಿದ ಸಾಕ್ಷ್ಯಗಳ ವಿವರ :</u>**

ಪಿ.ಡಬ್ಲ್ಯೂ–1 : ಶ್ರೀ ರಾಚಪ್ಪ (ದೂರುದಾರರು)
ಪಿ.ಡಬ್ಲ್ಯೂ–2 : ಶ್ರೀ ಶೇಖರಪ್ಪ (ತನಿಖಾಧಿಕಾರಿಗಳು)

II. **ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿರುವ ದಾಖಲೆಗಳ ವಿವರ :**

| | |
|---|---|
| ನಿ.ಪಿ. 1 : | ದೂರುದಾರರ ದೂರು |
| ನಿ.ಪಿ. 2 : | ನಮೂನೆ–1 |
| ನಿ.ಪಿ. 3 : | ನಮೂನೆ–2 |
| ನಿ.ಪಿ. 4 : | ಫಲಾನುಭವಿಗಳ ವಿವರ |
| ನಿ.ಪಿ. 5 : | ದೂರುದಾರರು ಸಲ್ಲಿಸಿದ ಫಲಾನುಭವಿಗಳ ವಿವರ |
| ನಿ.ಪಿ. 6 : | ತನಿಖಾಧಿಕಾರಿಗಳ ತನಿಖಾ ವರದಿ ದಿ: 13/12/2013 |
| ನಿ.ಪಿ. 7 : | ಜಯರಾಮ ಎಂ.ಸಿ, ವಿಮಲಾಬಾಯಿ.ಕೆ, ಕಲಾವತಿ.ಕೆ, ಪಾರ್ವತಿ.ಹೆಚ್, ಚಾಂದ್‌ಬಾಗ್, ಸಂಗಮೇಶಾ.ಕೆ, ಶೋಭಾ.ಕೆ, ಸಿದ್ದರಾಮ.ಹೆಚ್, ಗುರುಸಿದ್ದಯ್ಯ.ಎಂ., ಸಿದ್ದರಾಮ.ಎನ್, ಸಾವಿತ್ರಿ.ಪಿ ಹಾಗೂ ಸಿಂಧುಬಾಯಿ.ಪಿ ಇವರುಗಳ ಹೇಳಿಕೆಯನ್ನು ಒಟ್ಟಾರೆಯಾಗಿ |
| ನಿ.ಪಿ. 8 : | ಎಸ್.ಪಿ.ರವರ ಪತ್ರ ದಿ: 21/12/2013 |

III. **ಆ.ಸ.ನೌರವರ ಪರವಾಗಿ ನುಡಿದ ಸಾಕ್ಷ್ಯಗಳ ವಿವರ :**

ಡಿ.ಡಬ್ಲ್ಯೂ–1 : ಶ್ರೀಮತಿ ಪಿ.ಎ. ಕುಂಬಾರ (ಡಿ.ಜಿ.ಓ)
ಡಿ.ಡಬ್ಲ್ಯೂ–2 : ಶ್ರೀ ರಾಜಕುಮಾರ, ಸ.ಕಾ.ಅ.

IV. **ಆ.ಸ.ನೌ ರವರ ಪರವಾಗಿ ಗುರುತಿಸಿರುವ ದಾಖಲೆಗಳ ವಿವರ :**

| | |
|---|---|
| ನಿ.ಡಿ. 1 : | ದಿನಾಂಕ: 6/4/2008ರ ಗ್ರಾಮ ಸಭೆಯ ನಡವಳಿ |
| ನಿ.ಡಿ. 2 : | ದಿನಾಂಕ: 20/5/2009ರ ಗ್ರಾಮ ಸಭೆಯ ನಡವಳಿ |
| ನಿ.ಡಿ. 3 : | ಕಮಿಟಿ ಪುಸ್ತಕದ ಮೂರು ಹಾಳೆಯನ್ನು ಒಟ್ಟಾರೆಯಾಗಿ |

8ನೇ ಡಿಸೆಂಬರ್ 2020

(ಪುಷ್ಪಾಂಜಲಿ. ಬಿ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/507/2016/ARE-10

Multi Storied Buildings,
Dr.B.R.Ambedkar Veedhi,
Bengaluru-560 001,
Date: **10/12/2020**

**RECOMMENDATION**

Sub:- Departmental inquiry against;
Smt. P.A. Kumbara, the then Panchayath Development Officer, Baradola Grama Panchayath, Indi Taluk, Vijayapura District – Reg.

Ref:-1) Government Order No.ಗ್ರಾಅಪ/656/ಗ್ರಾಪಂಕಾ/2016 Bengaluru dated 17/10/2016

2) Nomination order No.UPLOK-1/DE/507/2016 Bengaluru dated 25/10/2016 of Upalokayukta-1, State of Karnataka, Bengaluru.

3) Inquiry Report dated 08/12/2020 of Additional Registrar of Enquiries-10, Karnataka Lokayukta, Bengaluru

----

The Government by its Order dated 17/10/2016 initiated the disciplinary proceedings against Smt. P.A. Kumbara, the then Panchayath Development Officer, Baradola Grama Panchayath, Indi Taluk, Vijayapura District (hereinafter referred to as Delinquent Government Official for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/507/2016 dated 25/10/2016 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by her.

3. The DGO Smt. P.A. Kumbara, the then Panchayath Development Officer, Baradola Grama Panchayath, Indi Taluk, Vijayapura District was tried for the following charge:-

> "That, you DGO – Smt. P.A. Kumbara, the then Panchayath Development Officer, Baradola Gram Panchayath, Indi Taluk, Vijayapura District, has allotted the houses to the persons who are already having houses and who are not eligible for the benefit and amount has been paid to them beneficiaries who are not having houses. Thus you, DGO, being a Government/public servant has failed to maintain absolute integrity besides devotion to duty and acted in a manner unbecoming of a Government servant and thus committed misconduct as enumerated U/R 3(1) of Karnataka Civil Service (Conduct) Rules 1966".

4. The Inquiry Officer (Additional Registrar of Enquiries-10) on proper appreciation of oral and documentary evidence has held that "ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರ–ಶ್ರೀಮತಿ ಪಿ.ಎ. ಕುಂಬಾರ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬರಡೋಲಾ ಗ್ರಾಮ ಪಂಚಾಯಿತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಮಾಡಲಾದ ಆರೋಪಗಳನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಲಾಗಿರುತ್ತದೆ ಹಾಗೂ ಆ.ಸ.ನೌ ರವರು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಹಣ ಅಂದರೆ ರೂ.1,38,600/– ಗಳಿಗೆ ಹೊಣೆಗಾರರಾಗಿರುತ್ತಾರೆ".

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO Smt. P.A. Kumbara, she is due to retire from service on 28/02/2043.

7. Having regard to the nature of charge proved against DGO Smt. P.A. Kumbara, it is hereby recommended to the Government for imposing penalty of recovering a sum of Rs.1,38,600/- from the salary and allowances payable to DGO Smt. P.A. Kumbara, the then Panchayath Development Officer, Baradola Grama Panchayath, Indi Taluk, Vijayapura District and also for imposing penalty of deferring the promotion of DGO Smt. P.A. Kumbara by four years, whenever she becomes due for promotion.

8. Action taken in the matter shall be intimated to this Authority.

Connected records are enclosed herewith.

N. Ananda 10/12

**(JUSTICE N. ANANDA)**
Upalokayukta-1,
State of Karnataka,
Bengaluru